ನಾನು ಗೋವೆಯ ಶಾಲೆಯಲ್ಲಿ ಅಧ್ಯಾಪಕನಾಗಿ ಕೆಲಸ ಮಾಡುತ್ತಿದ್ದವನು. ಆಗ ಗೋವೆ ಸ್ವತಂತ್ರ ರಾಜ್ಯವಾಗಿತ್ತು. ಮರಾಠಿ ಮಾಧ್ಯಮದ ಶಾಲೆಗಳಲ್ಲಿ ಕೊಂಕಣಿ, ಪೋರ್ಚುಗೀಸ್ ಭಾಷೆಗಳನ್ನು ಕಲಿಸಲಾಗುತ್ತಿತ್ತು. ಕನ್ನಡ ಇರುತ್ತಿರಲಿಲ್ಲ. 1963ರಲ್ಲಿ ಜನಗಣತಿಯ ಪ್ರಕಾರ ಗೋವೆಯಲ್ಲಿದ್ದ ಕನ್ನಡಿಗರ ಸಂಖ್ಯೆ 810. ಇವರಲ್ಲಿ ಹೆಚ್ಚಿನವರು ಹೊಟ್ಟೆಪಾಡಿಗೆ ವಲಸೆ ಬಂದ ಕೂಲಿ ಕಾರ್ಮಿಕರು. ಇವರಲ್ಲಿ ಹೆಚ್ಚಿನವರು ಪೌರಕಾರ್ಮಿಕರು, ಬೀದಿ ಗುಡಿಸುವವರು. ಇವರ 810 ಮಕ್ಕಳಿಗಾಗಿ ನಾನು ನನ್ನ ಮನೆಯಲ್ಲಿಯೇ ಶಾಲೆಯನ್ನು ಪ್ರಾರಂಭಿಸಿದೆ. ಆಮೇಲೆ ಶಾಲೆಯ ನೋಂದಣಿ ಮಾಡಿಸಲು ನನಗೆ ಫಾದರ್ ಪಿಂಟೋ ಅವರ ಸಹಕಾರ ದೊರೆಯಿತು. ಹೀಗೆ 1963ರಲ್ಲಿ ಗೋವೆಯಲ್ಲಿ ಮೊದಲ ಕನ್ನಡ ಶಾಲೆ ಪ್ರಾರಂಭವಾಯಿತು. ಮಕ್ಕಳ ಹಾಜರಾತಿಯೂ ಇತ್ತು. ಈ ಶಾಲೆಯನ್ನು ಪ್ರೌಢಶಾಲೆಯಾಗಿ ಮುಂದುವರಿಸುವ ನಮ್ಮ ಕನಸು ಮಾತ್ರ ಅವಕಾಶವಾದಿಗಳಿಂದಾಗಿ

## ಗೀತಾ ಶೆಣೈ

ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಜೀವನ ಚರಿತ್ರೆ, ಅನುವಾದ ಮತ್ತು ಮಹಿಳಾ ಅಧ್ಯಯನ ಅವರ ಆಸಕ್ತಿಯ ಕ್ಷೇತ್ರಗಳು. ಇಂಗ್ಲಿಷ್, ಕೊಂಕಣಿ ಮತ್ತು ಮರಾಠಿಯಿಂದ ಕನ್ನಡಕ್ಕೆ ಹಾಗೂ ಕನ್ನಡದಿಂದ ಇಂಗ್ಲಿಷ್, ಮರಾಠಿ, ಕೊಂಕಣಿ ಭಾಷೆಗಳಿಗೆ ಸಾಕಷ್ಟು ಕೃತಿಗಳನ್ನು ಭಾಷಾಂತರ ಮಾಡಿದ್ದಾರೆ. ಕನ್ನಡ ದಾಸ ಸಾಹಿತ್ಯ, ವಚನಸಾಹಿತ್ಯ, ಕುವೆಂಪು ವಿಚಾರ ಸಾಹಿತ್ಯವನ್ನು ಕೊಂಕಣಿಗೆ ಅನುವಾದಿಸಿದ್ದಾರೆ. ಈವರೆಗೆ ಸುಮಾರು 50ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

